ಓ.ಎಸ್.ಸಂಖ್ಯೆಃ 33/2017

ದಿನಾಂಕಃ 06-01-2020 ರಂದು ಪಿ.ಡಬ್ಲ್ಯೂಃ 01 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ. ಕೆ.ಬಿ.ಎಮ್. ವಕೀಲರಿಂದ.

ನಾನು ವಕೀಲ ವೃತ್ತಿ ಮಾಡುತ್ತಿದ್ದೇನೆ. ನನ್ನ ತಂದೆ ಮತ್ತು ನಾವು ಒಂದೇ ಮನೆಯಲ್ಲಿ ಪ್ರತ್ಯೇಕವಾಗಿ ಇದ್ದೇವೆ. ನಮ್ಮ ಕುಟುಂಬಕ್ಕೆ ಬಹಳ ಸ್ವತ್ತುಗಳಿದ್ದವು, ಅವುಗಳಲ್ಲಿ ಸುಮಾರು ಸ್ವತ್ತುಗಳನ್ನ ಮಾರಾಟ ಮಡಲಾಗಿದೆ. ನನ್ನ ತಂದೆ ಓ.ಎಸ್.152/2003 ರ ದಾವೆಯನ್ನು ಏತಕ್ಕೆ ಹಾಕಿದ್ದರು ಎಂದು ಗೊತ್ತಿಲ್ಲ. ನನ್ನ ತಂದೆಗೆ ಒಟ್ಟು 5 ಹೆಣ್ಣು ಮಕ್ಕಳು ಆ ಪೈಕಿ ಮೂವರು ತೀರಿಹೋಗಿದ್ದು ಉಳಿದ ಎಬ್ಬರು ಇದ್ದಾರೆ. ನನ್ನ ಅತ್ತೆಯಂದಿರು ಒಂದು ಭಾಗದ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ. ಆ ದಾವೆಯಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪನಿಗೆ ಸ್ವತ್ತುಗಳಾಗಿವೆ ಭಾಗ ಕೇಳಿದ್ದಾರೆ. ದಿನಾಂಕಃ 10-06-1998 ರ ವಿಭಾಗ ಪತ್ರ ನೊಂದಣಿ ಆಗಿಲ್ಲ. 1998ರ ವಿಭಾಗ ಪತ್ರದಲ್ಲಿ ದಾವಾ 1ನೇ ಸ್ವತ್ತನ್ನ ಸೇರಿಸಿರಲಿಲ್ಲ, ಕಾರಣ ಅದು ನನ್ನ ತಾತನಿಗೆ ಸೇರಿದ ಸ್ವತ್ತಾಗಿತ್ತು.

ನನ್ನ ತಾತ ಸೊಣ್ಣಪ್ಪ 1999 ರಲ್ಲಿ ತೀರಿಹೋದರು. ನನ್ನ ತಾತ ಬದುಕಿದ್ದಾಗಲೇ ನನ್ನ ತಂದೆ ವಿಭಾಗವಾಗಿದ್ದರು. 16-03-2009 ರ ಸಮಯದಲ್ಲಿ ಡಿಗ್ರಿ ಕಲಿಯುತ್ತಿದ್ದೆನು. ಆಗ ನನಗೆ ವಯಸ್ಸು 20 ಆಗಿರಬಹುದು. ನನಗೆ ನನ್ನ ತಂದೆ ಮತ್ತು ಚಿಕ್ಕಪ್ಪ ಜಿಪಿಎ ಮಾಡಿಕೊಟ್ಟಿರುವ ವಿಚಾರ ಗೊತ್ತಿಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪ ರೆವಿನ್ಯೂ ದಾಖಲೆಗಳನ್ನ, ವಂಶವೃಕ್ಷವನ್ನ, ಗುರುತಿನ ಚೀಟಿಗಳನ್ನು 4ನೇ ಪ್ರತಿವಾದಿಗೆ ಕೊಟ್ಟಿದ್ದರು ಎಂದರೆ ಸುಳ್ಳು. 20-12-1990 ರಲಿಪ್ಲಿ ನನ್ನ ತಂದೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಿಪಿ.1 ನ್ನ ಸೃಷ್ಟಿ ಮಾಡಿದ್ದಾರೆ ಎಂದರೆ ಸುಳ್ಳು. ನನ್ನ ತಂದೆ ಮತ್ತು ಚಿಕ್ಕಪ್ಪ 4ನೇ ಪ್ರತಿವಾದಿಗೆ ಜಿ.ಪಿ.ಎ. ಮಾಡಿಕೊಟ್ಟು ಸಂಪೂರ್ಣ ಪ್ರತಿಫಲವನ್ನ ಪಡೆದುಕೊಂಡಿದ್ದಾರೆ ಎಂದರೆ ಸುಳ್ಳು.

ಮೂಲತಃ ದಾವಾ 1ನೇ ಸ್ವತ್ತು ನನ್ನ ತಾತ ಕೊಂಡುಕೊಂಡ ಸ್ವತ್ತು. ನನ್ನ ತಂದೆಗೆ ಸೇರಿದ ಎಲ್ಲಾ ಸ್ವತ್ತುಗಳನ್ನ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಉದ್ದೇಶ ಪೂರ್ವಕವಾಗಿ ದಾವಾ 1ನೇ ಸ್ವತ್ತನ್ನು 4ನೇ ಪ್ರತಿವಾದಿಗೆ ತೊಂದರೆ ಕೊಡಲು ದಾವಾ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪ ಅವರ ಮಕ್ಕಳ ಮದುವೆಗಾಗಿ ಮತ್ತು ನನ್ನ ವಿದ್ಯಾಭ್ಯಾಸಕ್ಕಾಗಿ ದಾವಾ 1ನೇ ಸ್ವತ್ತನ್ನು ಜಿ.ಪಿ.ಎ. ಮೂಲಕ 4ನೇ ಪ್ರತಿವಾದಿಗೆ ಪಡೆದು ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ನನ್ನ ಅತ್ತೆಯಂದಿರಿಗೂ 1998 ರಲ್ಲಿ ವಿಭಾಗ ಆದಾಗ ಭಾಗ ಕೊಟ್ಟಿದ್ದೆವು. ತಂದೆ, ಚಿಕ್ಕಪ್ಪ ಮತ್ತು ಅವರ ಮಕ್ಕಳೆಲ್ಲಾ ಅಂದರೆ ನಾನು ಸೇರಿ ಜಿ.ಪಿ.ಎ. ಯನ್ನು 4ನೇ ಪ್ರತಿವಾದಿಗೆ ಮಾಡಿಕೊಟ್ಟಿದ್ದೇವೆ ಎಂದರೆ

ಸುಳ್ಳು. ಫೋರ್ಜರಿ ಆಗಿದೆ ಎಂದು ನಿಮ್ಮ ತಂದೆ ಮತ್ತು ಚಿಕ್ಕಪನ ಮೇಲೆ ಏಕೆ ಕೇಸು ಮಾಡಿಲ್ಲ ಎಂದರೆ ಸಾಕ್ಷಿದಾರ, ಈ ದಾವೆ ಮಾಡಿದ್ದಾರೆ ಎನ್ನುತ್ತಾರೆ. ನಾನು ಯಾವುದೇ ಕ್ರಿಮಿನಲ್ ಪ್ರಕರಣ ಮಾಡಿಲ್ಲ. ನಾನು ಇಂಗ್ಲೀಷ್‌ನಲ್ಲಿ ಸಹಿ ಮಾಡುತ್ತೇನೆ. ನನ ಅಕ್ಕಂದಿರು ಸರ್ವೆ ನಂಬರ್.62 ನನ್ನ ತಂದೆ ಮಾರಾಟ ಮಾಡಿದ್ದಾರೆಂದು ದಾವೆ ಮಾಡಿ ಪ್ರಶ್ನೆ ಮಾಡಿದ್ದು, ನಾನು ಬೇಕೆಂದೇ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ, ಸಾಕ್ಷಿದಾರ ಆ ಸ್ವತ್ತನ್ನು ನಾನು ಸೇರಿ ಮಾರಾಟ ಮಾಡಿದ್ದೇನೆ ಎನ್ನುತ್ತಾರೆ. ಆ ದಾವಾ ರಾಜೀಯಲ್ಲಿ ಮುಕ್ತಾಯವಾಗಿದೆ ಎಂದರೆ ಇರಬಹುದು.

<u>ಮುಂದುವರೆದ ಪಾಟೀ ಸವಾಲು ಸಮಯ ಕೋರಿದ್ದಾರೆ.</u>

(ತೆರೆ ದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖ ನದಂತೆ ಸಾಕ್ಷಿಯ ಹೇಳಿ ಕೆಯನ್ನು ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಇದೆ

(ಮಂಜುನಾಥ್. ಡಿ.ಆರ್.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಶಿಡ್ಲಘಟ್ಟ.